ಉದಯಕಾಲ

ಪಂಚ ಗ್ಯಾರಂಟಿ ಯೋಜನೆ ಜನರ ಆರ್ಥಿಕತೆಗೆ ಶಕ್ತಿ ತುಂಬಿವೆ

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಶಿವಾನಂದಸ್ವಾಮಿ

ಉದಯಕಾಲ ನ್ಯೂಸ್

ಚಿಕ್ಕಮಗಳೂರು: ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕತೆಗೆ ಮತ್ತು ಬಡ ಕುಟುಂಬಗಳ ಜೀವನ ಮಟ್ಟ ಸುಧಾರಣೆಗೆ, ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪರೋಕ್ಷವಾಗಿ ಶಕ್ತಿ ತುಂಬಿದೆ. ರಾಜ್ಯದ ಜಿ.ಡಿ.ಪಿ.ಹೆಚ್ಚಳವಾಗಿದ್ದು, ಜನರ ಜೀವನಮಟ್ಟ ಸುಧಾರಣೆಯಾಗಿದೆ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಸಿ.ಶಿವಾನಂದಸ್ವಾಮಿ ಅಭಿಮತ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಪಂಚಾಯಿತಿ ಮಿನಿ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶೇ.99 ರಷ್ಟು ಫಲಾನುಭವಿಗಳಿಗೆ ಯೋಜನೆಗಳ ಲಾಭ ದೊರಕಿದೆ. ಒಂದೆರಡು ಪ್ರಕರಣಗಳನ್ನು ಹಿಡಿದು ಗ್ಯಾರಂಟಿ ಯೋಜನೆಗಳನ್ನು ಟೀಕಿಸುವವರು ಮೊದಲು ಫಲಾನುಭವಿಗಳ ಪಟ್ಟಿ ಪರಿಶೀಲಿಸಬೇಕು. ಯೋಜನೆಗಳ ಲಾಭ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಿಗುವಂತೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ವಿನಾಕಾರಣ ಯೋಜನೆಗಳನ್ನು ದೂಷಿಸಬಾರದು ಎಂದರು.

ಜೂನ್ ತಿಂಗಳಿನಿಂದ ಶಾಲಾ-ಕಾಲೇಜುಗಳು ಆರಂಭಗೊಳ್ಳುವ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಬಸ್‌ನಲ್ಲಿ ಸಂಚರಿಸಲು ಯಾವುದೇ ಸಮಸ್ಯೆ ಉಂಟಾಗದಂತೆ ಸಾರಿಗೆ ಇಲಾಖೆ ಅಧಿಕಾರಿಗಳು ನಿಗದಿತ ಸಮಯದಲ್ಲಿ ಬಸ್ ಸಂಚಾರ ವ್ಯವಸ್ಥೆ ಕಲ್ಪಿಸಬೇಕು ಎಂದು ಕೆಎಸ್‌ಆರ್‌ಟಿಸಿ ನಿಗಮದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯ ಕೆಲವು ಗ್ರಾಮೀಣ ಭಾಗದಲ್ಲಿ ಸಂಚರಿಸುವ ಸರ್ಕಾರಿ ಬಸ್‌ಗಳು ಕೆಟ್ಟು ನಿಲ್ಲುತ್ತಿದ್ದು, ಇದರಿಂದ ಪ್ರಯಾಣಿಕರ ಸಂಚಾರಕ್ಕೆ ಸಮಸ್ಯೆ ಉಂಟಾಗುತ್ತಿದೆ. ಕೆಲವು ಕಡೆ ಮಹಿಳೆಯರು ತಂಗುದಾಣಗಳ ಬಳಿ ಇದ್ದರೂ ಕೂಡ ಬಸ್ ನಿಲ್ಲಿಸದೆ ವಾಹನ ಚಾಲಕರು ತೆರಳುತ್ತಿರುವ ದೂರುಗಳು ಕೇಳಿ ಬರುತ್ತಿದ್ದು, ಮುಂದೆ ಈ ರೀತಿ ಆಗದಂತೆ ಎಚ್ಚರ ವಹಿಸಬೇಕೆಂದು ತಿಳಿಸಿದರು.

ಅನ್ನಭಾಗ್ಯ ಯೋಜನೆಯಡಿ ಕುಟುಂಬಸ್ಥರು ಆತಂಕಪಡುವ ಅಗತ್ಯವಿಲ್ಲ. ಮೇ ಮತ್ತು ಜೂನ್ ತಿಂಗಳ ಪಡಿತರವನ್ನು ಜೂನ್ ತಿಂಗಳಲ್ಲಿ ಒಟ್ಟಿಗೆ ವಿತರಿಸಲಾಗುವುದು ಎಂದು ಆಹಾರ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

ಗೃಹಲಕ್ಷ್ಮೀ ಯೋಜನೆಯಡಿ 2,62,880 ಫಲಾನುಭವಿಗಳಿಗೆ ಫೆಬ್ರವರಿ ಮಾಹೆಯ ಅಂತ್ಯಕ್ಕೆ 52,57,60,000 ರೂ.ಗಳನ್ನು ಅವರ ಖಾತೆಗೆ ಜಮಾ ಮಾಡಲಾಗಿದೆ. ಗೃಹಜ್ಯೋತಿ ಯೋಜನೆಯಡಿ ಜಿಲ್ಲೆಯ 2,72,403 ಯಜಮಾನಿಯರಿಗೆ 29 ಕಂತುಗಳ ಮೂಲಕ 1477 ಕೋಟಿ, ಗೃಹಜ್ಯೋತಿ ಯೋಜನೆಯಡಿ 3,12,925 ಆರ್ ಆರ್ ಮೀಟರ್‌ಗಳ ಸುಮಾರು 10 ಲಕ್ಷ ಫಲಾನುಭವಿಗಳ ಪರವಾಗಿ ಸರ್ಕಾರ 365 ಕೋಟಿ ರೂ.ಗಳನ್ನು ಭರಿಸಿದೆ. ಅನ್ನಭಾಗ್ಯ ಯೋಜನೆಯಡಿ 8,22,763 ಫಲಾನುಭವಿಗಳಿಗೆ ನೇರ ನಗದು ಹಾಗೂ ಅಕ್ಕಿಯ ಮೂಲಕ 360 ಕೋಟಿ ರೂ. ನೀಡಿದ್ದರೆ, ಶಕ್ತಿ ಯೋಜನೆಯಡಿ ಚಿಕ್ಕಮಗಳೂರು ವಿಭಾಗದ ಬಸ್‌ಗಳಲ್ಲಿ 6.26 ಕೋಟಿ ಟ್ರಿಪ್‌ಗಳ ಮೂಲಕ ಮಹಿಳೆಯರು ಓಡಾಡಿದ್ದು, ಇದಕ್ಕಾಗಿ ಸರ್ಕಾರ 247 ಕೋಟಿ ರೂ.ಗಳನ್ನು ಮತ್ತು ಯುವನಿಧಿ ಯೋಜನೆಯಡಿ ಜಿಲ್ಲೆಯ 49 ಸಾವಿರ ನಿರುದ್ಯೋಗಿ ಪದವಿ ಮತ್ತು ಡಿಪ್ಲೊಮಾ ಪದವೀಧರರಿಗೆ 15 ಕೋಟಿ (ಕ್ರಮವಾಗಿ ಮಾಸಿಕ 3 ಸಾವಿರ ಹಾಗೂ 1,500 ರಂತೆ) ರೂ.ಗಳನ್ನು ನೀಡಲಾಗಿದೆ. ಒಟ್ಟಾರೆ ಜಿಲ್ಲೆಯ ಸುಮಾರು 10 ಲಕ್ಷ ಫಲಾನುಭವಿಗಳಿಗೆ ಈ ಪಂಚ ಗ್ಯಾರಂಟಿಗಳಿಂದ 2,465 ಕೋಟಿ ರೂ.ಗಳನ್ನು ಸರ್ಕಾರ ಕೊಡ ಮಾಡಿದೆ ಎಂದು ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು.

ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷರುಗಳಾದ ಎಸ್.ಎನ್. ಮಂಜುನಾಥ್, ಸಮೀವುಲ್ಲಾ, ಹೆಚ್.ಎಸ್. ಕೃಷ್ಣೇಗೌಡ, ಚಂದ್ರಮೌಳಿ, ಹೇಮಾವತಿ, ಜಿ.ಪಂ. ಉಪ ಕಾರ್ಯದರ್ಶಿ ಗೌರವ್ ಕುಮಾರ್‌ಶೆಟ್ಟಿ ಹಾಗೂ ವಿವಿಧ ತಾಲ್ಲೂಕು ಅಧ್ಯಕ್ಷರುಗಳು, ಮತ್ತು ಸದಸ್ಯರುಗಳು, ಹಾಗೂ ಪಂಚ ಗ್ಯಾರಂಟಿ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಚುಟುಕು ಸುದ್ದಿ

ಕಾರ್ಮಿಕರಿಗೆ ಕನಿಷ್ಠ ವೇತನ ನೀಡುತ್ತಿರುವುದು ಅವೈಜ್ಞಾನಿಕ

ಉದಯಕಾಲ ನ್ಯೂಸ್

ಮೂಡಿಗೆರೆ : ಸುಮಾರು 81ಕ್ಕೂ ಅಧಿಕ ಉದ್ಯೋಗವಲಯದ ಕಾರ್ಮಿಕರ ಕನಿಷ್ಠವೇತನ 10 ವರ್ಷದ ನಂತರ ಹೆಚ್ಚಳ ಮಾಡಿ ಈಗಾಗಲೇ ರಾಜ್ಯ ಸರಕಾರ ಅಧಿಸೂಚನೆ ಹೊರಡಿಸಿದೆ. ಈ ಹೆಚ್ಚಳ ಇಂದಿನ ಬೆಲೆ ಏರಿಕೆಗೆ ಕಾರ್ಮಿಕರ ದಿನಗೂಲಿಗಿಂತ ಕಡಿಮೆ ಪ್ರಮಾಣದ ಅವೈಜ್ಞಾನಿಕ ಕನಿಷ್ಠವೇತನವೆಂದು ಟಿಯುಸಿಐ ಜಿಲ್ಲಾಧ್ಯಕ್ಷ ಕೆ.ಕೆ.ಕೃಷ್ಣಪ್ಪ ದೂರಿದರು.

ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಮ್ಮನ್ನು ಆಳುವ ಶಾಸಕರ ವೇತನ 5 ವರ್ಷಕ್ಕೆ 2 ಬಾರಿ ವೈಜ್ಞಾನಿಕ ಮೀರಿ ಶೇ.160 ಪ್ರಮಾಣದಲ್ಲಿ ಆಗಿದೆ. ಆದರೆ 81 ಕ್ಷೇತ್ರದಲ್ಲಿ ದುಡಿಯುವ ಕಾರ್ಮಿಕರ ವೇತನ 10 ವರ್ಷದ ನಂತರ ಪರಿಷ್ಕರಣೆಗೊಂಡಿದೆ. ಅಲ್ಲದೇ ಅನುಸುತ ಅಕುಶಲ ಕಾರ್ಮಿಕರಿಗೆ 981 ರೂ ಜಾರಿ ಮಾಡಲಾಗಿದೆ. ಇವರಿಗೆ ದುಡಿಮೆ ಅವಧಿ, ಹೆಚ್ಚು ಕೆಲಸ ಮಾಡಿದರೆ ಎರಡು ಪಟ್ಟು ವೇತನ, ಸಾಮಾಜಿಕ ಭದ್ರತೆ, ಮಹಿಳಾ ಸುರಕ್ಷತೆ, ಮೂಲ ಸೌಕರ್ಯ ಕಾರ್ಮಿಕರಿಗೆ ತಲುಪಲು ಕಾರ್ಮಿಕ ಇಲಾಖೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ಅಲ್ಲದೇ ಎಲ್ಲಾ ಕಾರ್ಮಿಕ ಸಂಘಟನೆಗಳು ರಾಜಿ ಸಂಧಾನಕ್ಕೆ ಒಪ್ಪದೇ ಕಾರ್ಮಿಕರ ಹಕ್ಕುಗಳನ್ನು ದೊರಕಿಸಿಕೊಡುವುದರ ಜತೆಗೆ ದಿನಗೂಲಿ 1,000, ಕನಿಷ್ಠ ವೇತನ 35,000 ಜಾರಿಯಾಗಬೇಕೆಂದು ಆಗ್ರಹಿಸಿದರು.

ಇತ್ತೀಚಿಗೆ ಕೇಂದ್ರ ಸರಕಾರ ದೇಶದ ಭದ್ರತೆ ಹಾಗೂ ನುಸುಳು ಕೋರರ ತಡೆಗಟ್ಟಲು ಎಸ್‌ಐಆರ್ ಜಾರಿಗೊಳಿಸಲು ತಯಾರಿ ನಡೆಸಿದೆ. ಚುನಾವಣಾ ಮ್ಯಾಪಿಂಗ್ ನಡೆಸಿ ಇಲ್ಲಿನ ಕಾರ್ಮಿಕರು, ಆದಿವಾಸಿಗಳು ಬಹುತೇಕ ವಲಸೆ ಕಾರ್ಮಿಕರಲ್ಲಿ ಒಂದು ವರ್ಗವನ್ನು ಮತದಾನದ ಹಕ್ಕು ಉಳ್ಳವರು. ಮತದಾನದ ಹಕ್ಕು ಇಲ್ಲದವರು ಎಂಬ 2 ವರ್ಗ ಮಾಡುತ್ತಿದೆ. ಒಂದೊಂದೇ ಹಕ್ಕುಗಳನ್ನು ಕಸಿದುಕೊಳ್ಳುತ ನಂತರ ಈ ದೇಶದ ಪ್ರಜೆಗಳೇ ಅಲ್ಲ ಎಂದು ಬಿಂಬಿಸಲಾಗುತ್ತಿದೆ. ಇದನ್ನು ನಮ್ಮ ಕಾರ್ಮಿಕ ಸಂಘಟನೆ ತೀವ್ರವಾಗಿ ವಿರೋಧಿಸುತ್ತದೆ. ಕರ್ನಾಟಕದಲ್ಲಿ ಎಸ್‌ಐಆರ್ ಅನುಷ್ಠಾನಗೊಳಿಸುವುದನ್ನು ಕೈಬಿಡಬೇಕೆಂದು ಒತ್ತಾಯಿಸಿದರು.

ಸಿಕ್ಕ 35 ಸಾವಿರ ನಗದನ್ನು ಪೊಲೀಸ್ ಠಾಣೆಗೆ ಒಪ್ಪಿಸಿದ ಸ್ಥಳೀಯ ಮುಖಂಡ

ಉದಯಕಾಲ ನ್ಯೂಸ್, ಆಲ್ದೂರು: ಪಟ್ಟಣದ ಪುಷ್ಪಗಿರಿ ಹಾರ್ಡ್‌ವೇರ್ ಪಕ್ಕದಲ್ಲಿ ಕಾಂಗ್ರೆಸ್ ಮುಖಂಡರಾದ ಉಮೇಶ್ ದೇವರಹಳ್ಳಿ ರವರಿಗೆ 35 ಸಾವಿರ ನಗದು ಹಣ ಸಿಕ್ಕಿದ್ದು, ಅದನ್ನು ಕೂಡಲೇ ಪೊಲೀಸ್ ಠಾಣೆಗೆ ತಂದು ಒಪ್ಪಿಸಿದ್ದಾರೆ. ಸ್ವಲ್ಪ ಹೊತ್ತಿನ ಬಳಿಕ ಹಣವನ್ನು ಕಳೆದುಕೊಂಡಿದ್ದ ಕೂಲಿ ಕಾರ್ಮಿಕರಾದ ಶಿವಕುಮಾರ್ ಕವಿತಾ ದಂಪತಿಗಳು ದೂರು ನೀಡಲು ಬಂದಿದ್ದು, ಕಳೆದುಕೊಂಡಿದ್ದ ಹಣವನ್ನು ಪೊಲೀಸರ ಸಮ್ಮುಖದಲ್ಲಿ ಸಂಬಂಧಪಟ್ಟವರಿಗೆ ತಲುಪಿಸಲಾಯಿತು.

ಎಎಸ್‌ಐ ಸತೀಶ್ ನಾಯಕ್, ಸಿಬ್ಬಂದಿ ಚಂದ್ರಯ್ಯ ಇತರರು ಇದ್ದರು.

ವರ್ತಕರಿಗೆ ಕಲಬೆರಕೆ ಜೇನು ತುಪ್ಪ ನೀಡಿ ವಂಚನೆ

ಉದಯಕಾಲ ನ್ಯೂಸ್

ಬಾಳೆಹೊನ್ನೂರು: ಪಟ್ಟಣಗಳಲ್ಲಿ ವ್ಯಾಪಾರ ನಡೆಸುವ ವರ್ತಕರಿಗೆ ಸಕ್ಕರೆ, ಬೆಲ್ಲ ಮಿಶ್ರಿತವಾಗಿರುವ ಕಲಬೆರಕೆಯಾದ ಜೇನು ತುಪ್ಪ ನೀಡಿ ಹಣ ಪಡೆದು ವಂಚಿಸಿ ತೆರಳಿದ್ದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಪಟ್ಟಣ ವ್ಯಾಪ್ತಿಯಲ್ಲಿರುವ ದೊಡ್ಡ ಕಟ್ಟಡಗಳಲ್ಲಿ ಗೂಡು ಕಟ್ಟುವ ಹೆಜ್ಜೇನುಗಳ ಗೂಡನ್ನು ಕಿತ್ತು ಅದರಲ್ಲಿರುವ ಜೇನು ತುಪ್ಪಕ್ಕೆ ಸಕ್ಕರೆ, ಬೆಲ್ಲ ಮಿಶ್ರಿತದ ಪಾಕವನ್ನು ಸೇರಿಸಿ ವರ್ತಕರಿಗೆ ಮಾರಾಟಕ್ಕಾಗಿ ನೀಡಿ ಹಣ ಪಡೆದುಕೊಂಡು ಹೋಗಿರುವ ಹೊರ ರಾಜ್ಯದ ಕೆಲ ವ್ಯಕ್ತಿಗಳು ಪುನಃ ಇಂತಹ ವಂಚನೆ ಮಾಡಲು ಬಂದಾಗ ಸಿಕ್ಕಿಬಿದ್ದಿದ್ದಾರೆ.

ಹೊರ ರಾಜ್ಯಗಳಿಂದ ಬಂದಿರುವ ಕೆಲ ವ್ಯಕ್ತಿಗಳು ಬಾಳೆಹೊನ್ನೂರು ವ್ಯಾಪ್ತಿಯಲ್ಲಿರುವ ದೊಡ್ಡ ಕಟ್ಟಡದಲ್ಲಿ ಕಟ್ಟಿರುವ ಹೆಜ್ಜೇನು ಗೂಡುಗಳನ್ನು ಕಿತ್ತು ಅದರಲ್ಲಿ ತುಪ್ಪವನ್ನು ಕೆಲ ದಿನಗಳ ಹಿಂದೆ ಸಂಗ್ರಹಿಸಿದ್ದು, ಈ ತುಪ್ಪವನ್ನು ಸ್ಥಳೀಯವಾಗಿಯೇ ಅಗತ್ಯವುಳ್ಳ ವರ್ತಕರಿಗೆ ಹತ್ತಾರು ಕೆಜಿಗಳಷ್ಟು ನೀಡಿ ಸಾವಿರಾರು ರೂಪಾಯಿ ಹಣವನ್ನು ಪಡೆದು ಸ್ಥಳದಿಂದ ತೆರಳಿದ್ದಾರೆ. ಜೇನುತುಪ್ಪ ಪಡೆದ ವರ್ತಕರು ಅದು ಶುದ್ಧ ಜೇನು ತುಪ್ಪವೋ? ಕಲಬೆರಕೆಯೋ ಎಂದು ಪರೀಕ್ಷಿಸಿಲ್ಲ.

ಜೇನು ತುಪ್ಪ ನೀಡಿ ತೆರಳಿದ ಕೆಲ ದಿನಗಳ ಬಳಿಕ ಪುನಃ ಪಟ್ಟಣಕ್ಕೆ ಬೇರೆ ಕಟ್ಟಡಗಳಲ್ಲಿ ಇದ್ದ ಜೇನು ಗೂಡುಗಳನ್ನು ಕೀಳಲು ಇದೇ ತಂಡ ಬಂದಿದ್ದು, ಪಟ್ಟಣದ ಕಟ್ಟಡವೊಂದರಲ್ಲಿ ಜೇನು ಗೂಡುಗಳನ್ನು ಕಿತ್ತು ಅದರಲ್ಲಿನ ತುಪ್ಪ ತೆಗೆದಿದ್ದಾರೆ. ತುಪ್ಪ ತೆಗೆದು ಕೆಳಗಿಳಿದ ಬಳಿಕ ಶುದ್ಧ ಜೇನು ತುಪ್ಪಕ್ಕೆ ಬೇರೆ ಬಕೆಟ್‌ಗಳಲ್ಲಿ ವಂಚಕರು ತುಂಬಿಸಿ ತಂದಿದ್ದ ಸಕ್ಕರೆ, ಬೆಲ್ಲದ ಪಾಕದ ಮಿಶ್ರಣವನ್ನು ಬೆರೆಸುತ್ತಿದ್ದು, ಇದನ್ನು ಸ್ಥಳೀಯರು ಗಮನಿಸಿದ್ದಾರೆ.

ಕೂಡಲೇ ಅವರನ್ನು ತರಾಟೆಗೆ ತೆಗೆದುಕೊಂಡಿದ್ದು, ಈ ಹಿಂದೆ ಜೇನು ತುಪ್ಪ ಖರೀದಿಸಿದ್ದ ಅಂಗಡಿ ಮಾಲೀಕರಿಗೆ ತಿಳಿಸಿದ್ದಾರೆ. ಆಗ ಅವರು ಖರೀದಿಸಿದ್ದ ಜೇನು ತುಪ್ಪವನ್ನು ಪರಿಶೀಲಿಸಿದ್ದಾಗ ಕ್ಯಾನ್‌ಗಳಲ್ಲಿದ್ದ ಜೇನು ತುಪ್ಪವು ಕಲಬೆರಕೆಯಾಗಿರುವುದು ಕಂಡುಬಂದಿದೆ.

ಕೂಡಲೇ ವಿಷಯವನ್ನು ಪೊಲೀಸರ ಗಮನಕ್ಕೆ ತಂದಿದ್ದು, ಪೊಲೀಸರು ವಿವಿಧ ಹೊರ ರಾಜ್ಯದಿಂದ ಜೇನು ತುಪ್ಪ ತೆಗೆಯಲು ಬಂದಿದ್ದ ವ್ಯಕ್ತಿಗಳನ್ನು ಠಾಣೆಗೆ ಕರೆಯಿಸಿ ವಿಚಾರಣೆ ನಡೆಸಿದ್ದು, ಈ ವೇಳೆ ಮೋಸ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ.

ಬಳಿಕ ಈ ಹಿಂದೆ ವಂಚಿಸಿದ್ದ ವರ್ತಕರಿಗೆ ನೀಡಿದ್ದ ಕಲಬೆರಕೆ ಜೇನು ತುಪ್ಪ ನೀಡಿ ಮೋಸ ಮಾಡಿದ್ದ ಹಿನ್ನೆಲೆಯಲ್ಲಿ ಸ್ವಲ್ಪ ಹಣವನ್ನು ವಾಪಾಸ್ಸು ನೀಡಿದ್ದಾರೆ. ಪೊಲೀಸರು ಹೊರ ರಾಜ್ಯದ ವಂಚಕ ವ್ಯಕ್ತಿಗಳಿಗೆ ಇನ್ನು ಮುಂದೆ ಈ ರೀತಿ ಮಾಡದಂತೆ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ.

ಹೊರ ರಾಜ್ಯದ ಕೆಲ ವ್ಯಕ್ತಿಗಳು ಬಾಳೆಹೊನ್ನೂರು ಮಾತ್ರವಲ್ಲದೇ ಚಿಕ್ಕಮಗಳೂರು, ಶಿವಮೊಗ್ಗ, ಕೊಪ್ಪ, ಶೃಂಗೇರಿ, ಆಲ್ದೂರು, ಎನ್.ಆರ್.ಪುರ ಮುಂತಾದ ಭಾಗಗಳಲ್ಲೂ ಇದೇ ಮಾದರಿಯಲ್ಲಿ ಜೇನು ಗೂಡುಗಳನ್ನು ಕಿತ್ತು ಕೊಡುವ ನೆಪದಲ್ಲಿ ಇದೇ ರೀತಿ ಕಲಬೆರಕೆ ಜೇನು ತುಪ್ಪ ನೀಡಿ ವಂಚಿಸಿದ್ದಾರೆ ಎಂದು ತಿಳಿದುಬಂದಿದೆ.

ಅಂಗಡಿಗಳ ವರ್ತಕರು, ಸಾರ್ವಜನಿಕರು ಹೊರ ರಾಜ್ಯದ ಇಂತಹ ವ್ಯಕ್ತಿಗಳಿಂದ ಜೇನು ತುಪ್ಪ ಖರೀದಿಸುವ ಮುನ್ನ ಪರಿಶೀಲಿಸಿ ಖರೀದಿಸಬೇಕು ಅಥವಾ ಸ್ಥಳೀಯ ಗ್ರಾಮೀಣ ಜನರಿಂದಲೇ ಶುದ್ಧ ಜೇನು ತುಪ್ಪವನ್ನು ಖರೀದಿಸಬೇಕು ಎಂದು ವಂಚನೆಗೊಳಗಾದ ಅಂಗಡಿ ಮಾಲೀಕ ಹೇಳಿದ್ದಾರೆ.

ಅಜ್ಜಂಪುರ ಸಮೀಪ ಡಾಣಯಕಪುರ.ಗ್ರಾಮದಲ್ಲಿ ಇನ್ನರ್ ವಿಲ್ ಪ್ರಿನ್ಸ್‌ವತಿಯಿಂದ ಅಂಗನವಾಡಿ ಮಕ್ಕಳಿಗೆ ಆಟಿಕೆ ಮತ್ತು ಕುರ್ಚಿಗಳನ್ನು ಕೊಡುಗೆ ನಿಡಿದರು. ಅಧ್ಯಕ್ಷರಾರ ಅನಿತಾ ಪ್ರಭು. ಹಾಗೂ ಕ್ಲಬ್ ನ ಸಧಸ್ಯರಾದ ಭೂಮಿಕಾ. ಸುಧಾ ಇತರರು ಇದ್ದರು.

ಜನಸ್ಪಂದನ ಕಾರ್ಯಕ್ರಮದಲ್ಲಿ ಮಹಿಳೆಯರ ಆಕ್ರೋಶ

ಉಡುಗೆರೆ ಗ್ರಾಮ ಪಂಚಾಯಿತಿಯಲ್ಲಿ ಶಾಸಕರ ನೇತೃತ್ವದಲ್ಲಿ ಜನ ಸಂಪರ್ಕ ಸಭೆ

ಉದಯಕಾಲ ನ್ಯೂಸ್

ಕಡೂರು: ತಾಲೂಕಿನ ಯಗಟಿ ಹೋಬಳಿಯ ಉಡುಗೆರೆ ಗ್ರಾಮ ಪಂಚಾಯಿತಿಯಲ್ಲಿ ಮಂಗಳವಾರ ಶಾಸಕರ ನಡೆ ಗ್ರಾಮ ಪಂಚಾಯಿತಿ ಕಡೆ ಕಾರ್ಯಕ್ರಮದ ಅಡಿಯಲ್ಲಿ ಶಾಸಕರ ನೇತೃತ್ವದಲ್ಲಿ ಜನ ಸಂಪರ್ಕ ಸಭೆ ಆಯೋಜಿಸಲಾಗಿತ್ತು. ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯ ಬೇಜವಾಬ್ದಾರಿ ಕಾರ್ಯದಿಂದ ಸಮಸ್ಯೆಗಳು ಬಹಳ ಕಂಡುಬಂದಿತು. ಗ್ರಾಮದ ಮುಖ್ಯ ರಸ್ತೆಗಳಲ್ಲೇ ಎಮ್ಮೆಗಳನ್ನು ಕಟ್ಟುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ, ಬಹುತೇಕ ಮನೆಗಳಲ್ಲಿ ಮದ್ಯ ವ್ಯಾಪಾರ ನಿರಂತರವಾಗಿ ನಡೆಯುತ್ತಿದ್ದು ಇದನ್ನು ತಡೆಯಬೇಕು ಎಂದು ಮಹಿಳೆಯರು ಲಿಖಿತ ಅರ್ಜಿ ಸಲ್ಲಿಸಿದರು.

ನೂರು ವರ್ಷಗಳಷ್ಟುಉ ಹಳೆಯದಾಗಿರುವ ವಿದ್ಯುತ್ತು ಕಂಬಗಳು ಬೀಳುವ ಸ್ಥಿತಿಯಲ್ಲಿದೆ, ವಯರ್ಗಳು ಜೋತಾಡುತ್ತವೆ, ಗ್ರಾಮಕ್ಕೆ ಹೆಚ್ಚುವರಿ ಟಿಸಿ ಅಗತ್ಯವಿದೆ, ವಯೋವೃದ್ದರಿಗೆ ಪಿಂಚಣಿ ಬರುತ್ತಿಲ್ಲ, ಅಕ್ರಮ ಸಕ್ರಮ ಯೋಜನೆ ಅಡಿ ಹಣ ಕಟ್ಟಿದವರಿಗೆ ಟಿಸಿ ಅಳವಡಿಸಬೇಕಿದೆ, ಸಾಗುವಳಿ ಪತ್ರಗಳನ್ನು ನೀಡುವುದು ಬಾಕಿಇದೆ, ಮನೆ ಇಲ್ಲ ಹೊಸಮನೆ ಕೊಡಿಸಿ, ಶಾಲೆಯ ದಾಸೋಹ ಕೊಠಡಿ ಕಾಮಗಾರಿ ಆಗಬೇಕಿದೆ, ಗುಡ್ಡೆಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ, ಶುದ್ಧ ಗಂಗಾ ಘಟಕ ನೀರು ಸುಚಿತ್ವವಾಗಿಲ್ಲ, ಈ ಸ್ವತ್ತು ಕೊಡುತ್ತಿಲ್ಲ, ಚರಂಡಿಯ ನೀರು ಮನೆಗಳಿಗೆ ನುಗ್ಗುತ್ತದೆ ಎಂಬ ಹಲವಾರು ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚೆಗಳು ನಡೆದವು.

ಈ ಸಮಸ್ಯೆಗಳನ್ನು ಆಲಿಸಿದ ಕುಪಿತಗೊಂಡ ಶಾಸಕ ಕೆ.ಎಸ್. ಆನಂದ್ ಸರ್ಕಾರ ನಿಮಗೆ ಸಂಬಳ ನೀಡುತ್ತದೆ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡದಿರಲು ಕಾರಣವೇನು, ಸರಿಯಾಗಿ ಕೆಲಸ ಮಾಡದೇ ಇದ್ದರೆ ಪಿಡಿಓ ಮತ್ತು ವಿ ಐ ವರ್ಗಾವಣೆ ಮಾಡಿಸಿಕೊಂಡು ಹೋಗಿ ಎಂದು ಆಕ್ರೋಶ ವ್ಯಕ್ತಪಡಿಸಿದರು. ಎಲ್ಲಾ ಸಮಸ್ಯೆಗಳನ್ನು ಆಲಿಸಿ ಕೆಲವರು ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರವನ್ನು ದೊರಕಿಸಿಕೊಡಲಾಯಿತು. ಜಟಿಲವಾಗ ಸಮಸ್ಯೆಗಳಿಗೆ ಗಡುವು ನೀಡಲಾಯಿತು, ಒಟ್ಟಾರೆಯಾಗಿ ಜನಸ್ಪಂದನ ಕಾರ್ಯಕ್ರಮ ಸಮಸ್ಯೆಗಳಿಂದ ತುಂಬಿತ್ತು, ಅತಿ ಹೆಚ್ಚು ಸಮಸ್ಯೆಗಳನ್ನು ಮಹಿಳೆಯರೇ ಹೇಳಿಕೊಂಡರು.

ಪ್ರಾರಂಭದಲ್ಲಿ ಸಭೆಯನ್ನು ಉದ್ಘಾಟಿಸಿ ಶಾಸಕ ಕೆ.ಎಸ್. ಆನಂದ್ ಮಾತನಾಡಿ ಎಲ್ಲಾ ಇಲಾಖೆಗಳ 38 ಅಧಿಕಾರಿಗಳು ತಮ್ಮ ಗ್ರಾಮ ಪಂಚಾಯಿತಿಗೆ ಆಗಮಿಸಿರುತ್ತಾರೆ ಜನರ ಸಮಸ್ಯೆಗಳನ್ನು ಆಲಿಸುವ ಕಾರ್ಯ ನಡೆಯಲಿದೆ, ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಸಭೆ ನಡೆಸಲಾಗುತ್ತಿದೆ. ಮೊದಲಿನ ಶಾಸಕರುಗಳು ಗ್ರಾಮಗಳಿಗೆ ಐದು ವರ್ಷಕ್ಕೊಮ್ಮೆ ಬರುತ್ತಿದ್ದರು ನಿಮ್ಮ ಸಮಸ್ಯೆಗಳನ್ನು ಆಲಿಸಲು ಆಗಬೇಕಾಗಿರುವ ಅಭಿವೃದ್ಧಿಯ ಬಗ್ಗೆ ತಿಳಿದುಕೊಳ್ಳಲು ಕಡೂರು ವಿಧಾನಸಭಾ ಕ್ಷೇತ್ರದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತೆರಳಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲಾಗುತ್ತಿದೆ ಎಂದರು.

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಗ್ರಾಮದ ದೇವಾಲಯಗಳ ಅಭಿವೃದ್ಧಿಗಾಗಿ 25 ಲಕ್ಷ ರೂ ಅನುದಾನ ನೀಡಲಾಗಿದೆ. ವಿವಿಧ ರಸ್ತೆ ಕಾಮಗಾರಿಗೆ 15 ಲಕ್ಷ, ಸಿಸಿ ರಸ್ತೆ ಕಾಮಗಾರಿಗೆ ಒಂದು ಕೋಟಿ, ಅಂಗನವಾಡಿ ಕಟ್ಟಡಕ್ಕೆ 2 ಲಕ್ಷ, ಸಣ್ಣೇನಹಳ್ಳಿ ಗ್ರಾಮದ ದೇವಾಲಯಗಳಿಗೆ 20 ಲಕ್ಷ, ಶಾಲಾ ದುರಸ್ತಿಗೆ ನಾಲ್ಕು ಲಕ್ಷ, ಲೋಕೋಪಯೋಗಿ ಇಲಾಖೆ ರಸ್ತೆ ಅಭಿವೃದ್ಧಿಗೆ ಒಂದುವರೆ ಕೋಟಿ, ಚೆಕ್ ಡ್ಯಾಮ್ ನಿರ್ಮಾಣಕ್ಕೆ 50 ಲಕ್ಷ, ಅಂಗನವಾಡಿಗಳಿಗೆ 22 ಲಕ್ಷ, ಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿಗೆ 10 ಲಕ್ಷ, ಈ ಭಾಗದ ಬೈರಗೊಂಡನಹಳ್ಳಿಯಲ್ಲಿ ನಿರ್ಮಾಣಗೊಳ್ಳುತ್ತಿರುವ ಮೊರಾರ್ಜಿ ವಸತಿ ಶಾಲೆಗೆ 22 ಕೋಟಿ ನೀಡಲಾಗಿದೆ,

ಯರದ ಕೆರೆ ರಸ್ತೆಗೆ ಅನುದಾನ ದೊರಕಿಸಲಾಗುವುದು, ಗೊಟ್ಟಿಗೆರೆ ಗ್ರಾಮದ ಬಳಿ ಸೇತುವೆ ನಿರ್ಮಾಣಕ್ಕೆ 2 ಕೋಟಿ ರೂ ಅನುದಾನ ಮಂಜೂರಾದಿ ದೊರಕಿದೆ ಎಂದರು.

ಈ ಸಂದರ್ಭದಲ್ಲಿ ತಹಸಿಲ್ದಾರ್ ಪೂರ್ಣಿಮಾ, ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಸಿ.ಆರ್. ಪ್ರವೀಣ್, ಗ್ರಾಮ ಪಂಚಾಯಿತಿ ಆಡಳಿತ ಅಧಿಕಾರಿ ಜಗದೀಶ್ ಎಂ ಎನ್, ಅಕ್ಷರ ದಾಸೋಹ ದೇವರಾಜ್, ಕಂದಾಯ ಇಲಾಖೆ ಅಧಿಕಾರಿ ತಿಪ್ಪೇಶ್, ಪಿಡಿಓ ಚಂದ್ರಶೇಖರ್, ಗ್ರಾಮದ ಮುಖಂಡ ಉಡುಗೆರೆ ರೇವಣ್ಣ ಹಾಗೂ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳು ಸದಸ್ಯರುಗಳು ಭಾಗವಹಿಸಿದ್ದರು.

ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಲಿಮಿಟೆಡ್

ಕಾರ್ಪೊರೇಟ್ ಕಚೇರಿ: ಮೋತಿಲಾಲ್ ಓಸ್ವಾಲ್ ಟವರ್, ರಹೀಮ್ತುಲ್ಲಾ ಸಯಾನಿ ರಸ್ತೆ, ಎಸ್ಟಿ ಡಿಪೋ ಎದುರು, ಪ್ರಭಾದೇವಿ, ಮುಂಬೈ–400025.
ಇಮೇಲ್:– hfquery@motilaloswal.com. CIN ಸಂಖ್ಯೆ :– U65923MH2013PLC248741

ಇ–ಹರಾಜು ಕಮ್ ಮಾರಾಟಕ್ಕೆ ಸಾರ್ವಜನಿಕ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ 8 ಮತ್ತು 9 ನೇ ನಿಯಮಗಳ ನಿಬಂಧನೆಯೊಂದಿಗೆ ಓದಲಾದ 2002 ರ ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ಅಡಿಯಲ್ಲಿ ಸ್ಥಿರ ಆಸ್ತಿ(ಗಳ) ಮಾರಾಟಕ್ಕೆ 15 ದಿನಗಳ ಇ–ಹರಾಜು ಮಾರಾಟ ಸೂಚನೆ.
ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು/ಖಾತರಿದಾರರು/ಅಡಮಾನದಾರರಿಗೆ ಸೂಚನೆ ನೀಡುತ್ತಾ, **ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಲಿಮಿಟೆಡ್** (ಹಿಂದೆ ಆಸ್ಪೈರ್ ಹೋಮ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ಗೆ ಅಡಮಾನ ಇಡಲಾದ ಕೆಳಗೆ ಉಲ್ಲೇಖಿಸಲಾದ ಆಸ್ತಿಯನ್ನು **"ಎಲ್ಲಿದೆಯೋ ಅಲ್ಲಿ", " ಹೇಗಿದೆಯೋ ಹಾಗೆ"** ಮತ್ತು **"ಏನಿದೆಯೋ ಅದೇ" "ಆನ್ಲೈನ್ ಇ–ಹರಾಜು"** ಮೂಲಕ ಬಾಕಿ ಮತ್ತು ಹೆಚ್ಚಿನ ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳನ್ನು ವಸೂಲಿ ಮಾಡಲು, ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮಗಳು 8 ಮತ್ತು 9 ರೊಂದಿಗೆ ಓದಲಾದ SARFAESI ಕಾಯ್ದೆಯ ನಿಬಂಧನೆಗಳ ಪ್ರಕಾರ ಕೆಳಗೆ ವಿವರಿಸಿದಂತೆ motilaloswalhf.com ವೆಬ್‌ಸೈಟ್ ಮೂಲಕ ಕೆಳಗೆ ನೀಡಲಾದ ವಿವರಗಳ ಪ್ರಕಾರ ಮಾರಾಟ ಮಾಡಲಾಗುತ್ತದೆ:

ಇ–ಹರಾಜಿನ ದಿನಾಂಕ ಮತ್ತು ಸಮಯ:– ದಿನಾಂಕ: 03–07–2026, ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 02:00 ರವರೆಗೆ (ಪ್ರತಿಯೊಂದಕ್ಕೂ 15 ನಿಮಿಷಗಳ ಅನಿಯಮಿತ ವಿಸ್ತರಣೆಗಳೊಂದಿಗೆ)

ಕ್ರಮ ಸಂಖ್ಯೆ.	ಸಾಲಗಾರರು / ಜಾಮೀನುದಾರರು / ಸಾಲ ಖಾತೆ	ಡಿಮ್ಯಾಂಡ್ ನೋಟೀಸ್ ದಿನಾಂಕ ಮತ್ತು ಮೊತ್ತ	ಸ್ಥಿರ ಆಸ್ತಿಯ ವಿವರಣೆ	ಮೀಸಲು ಬೆಲೆ, ಇಎಂಡಿ ಮತ್ತು ಇಎಂಡಿ ಸಲ್ಲಿಸುವ ಕೊನೆಯ ದಿನಾಂಕ
1.	ಲ್ಯಾನ್: LXDAV00417-180068106 ಶಾಖೆ: ದಾವಣಗೆರೆ ಸಾಲಗಾರ: ವೆಂಕಟೇಶ್ ಕೊಟ್ರಪ್ಪ ಸಹ–ಸಾಲಗಾರರು: ಮಂಜುಳಾ ಜಯಪ್ಪ ಖಾತರಿದಾರ:	10–12–2020 ರೂ.ಗಳಿಗೆ: 957694/– (ಒಂಬತ್ತು ಲಕ್ಷದ ಐವತ್ತೇಳು ಸಾವಿರದ ಆರು ನೂರಾ ತೊಂಬತ್ತನಾಲ್ಕು ಮಾತ್ರ)	ಸರ್ವೆ ಸಂಖ್ಯೆ – 142 ರಿಂದ 145, ಎಸ್ಪಿಎಸ್ ನಗರ, 2ನೇ ಹಂತ, ಎ ಬ್ಲಾಕ್, ಆರ್ಟಿಒ ಕಚೇರಿ ಹತ್ತಿರ, ದಾವಣಗೆರೆ, ಕರ್ನಾಟಕ – 577002	ಮೀಸಲು ಬೆಲೆ: ರೂ.884645/– (ಎಂಟು ಲಕ್ಷದ ಎಂಬತ್ತನಾಲ್ಕು ಸಾವಿರದ ಆರುನೂರ ನಲವತ್ತೈದು ರೂಪಾಯಿಗಳು ಮಾತ್ರ) ಇಎಂಡಿ: ರೂ.88465/– (ಎಂಭತ್ತೆಂಟು ಸಾವಿರ ನಾಲ್ಕುನೂರ ಅರವತ್ತೈದು ರೂಪಾಯಿಗಳು ಮಾತ್ರ) ಇಎಂಡಿ ಠೇವಣಿಯ ಕೊನೆಯ ದಿನಾಂಕ: 02–07–2026

ಇ–ಹರಾಜಿನ ನಿಯಮಗಳು ಮತ್ತು ಷರತ್ತುಗಳು: ಬಿಡ್ ದಾಖಲೆಯ ಮುಂದಿನ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ ಹರಾಜನ್ನು ನಡೆಸಲಾಗುತ್ತದೆ. ಬಿಡ್ದಾರರು ಬಿಡ್ಡಿಂಗ್ ಮಾಹಿತಿ ಮತ್ತು ಬೆಂಬಲಕ್ಕಾಗಿ ನಮ್ಮ ಇ–ಹರಾಜು ಸೇವಾ ಪೂರೈಕೆದಾರರಾದ **M/s ಕ್ರೆಡಿಸೊಲ್ಯೂಷನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ** ವೆಬ್ ಪೋರ್ಟಲ್ಗೆ ಭೇಟಿ ನೀಡಬಹುದು: credauction.com, ಇ–ಹರಾಜಿಗಾಗಿ ಇರಿಸಲಾದ ಸುರಕ್ಷಿತ ಆಸ್ತಿಯ ವಿವರಗಳು ಮತ್ತು ಆನ್ಲೈನ್ನಲ್ಲಿ ಸಲ್ಲಿಸಲಾಗುವ ಬಿಡ್ ಫಾರ್ಮ್. ಆಸಕ್ತ ಖರೀದಿದಾರರು ಹರಾಜಿನ ನಿಯಮಗಳು ಮತ್ತು ಷರತ್ತುಗಳು ಮತ್ತು ಪ್ರಕ್ರಿಯೆಯನ್ನು ಅದೇ ಪೋರ್ಟಲ್ನಲ್ಲಿ ಪರಿಶೀಲಿಸಬಹುದು ಮತ್ತು **ಬೊಪ್ಪೂರಿ ನಾಗರಾಜು 7304997399 ಮತ್ತು ಶಾಂತ ಕುಮಾರ್ ಪಿ 9731080228, ನಂದಕುಮಾರ್ ಪಿ 8976737857 ಅವರನ್ನು ಸಂಪರ್ಕಿಸಬಹುದು, ಮೇಲೆ ತಿಳಿಸಲಾದ ವೆಬ್ ಪೋರ್ಟಲ್ನಲ್ಲಿ ಲಭ್ಯವಿರುವ ವಿವರಗಳು ಮತ್ತು ಅವರ ಕೇಂದ್ರೀಕೃತ ಸಹಾಯ ಕೇಂದ್ರ:** +91 9137100020, ಇ–ಮೇಲ್ ಐಡಿ: **balram@credsolv.com** ಅನ್ನು ಸಂಪರ್ಕಿಸಬಹುದು.

ಸ್ಥಳ: ಕರ್ನಾಟಕ. ಸಹಿ/–ಅಧಿಕೃತ ಅಧಿಕಾರಿ
ದಿನಾಂಕ: 27.05.2026. (ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಲಿಮಿಟೆಡ್) (ಹಿಂದೆ ಆಸ್ಪೈರ್ ಹೋಮ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

ನೋಂದಾಯಿತ ಕಚೇರಿ: ಗ್ರೇಪ್ ಗಾರ್ಡನ್, ನಂ. 27, 3ನೇ ಎ ಕ್ರಾಸ್, 18ನೇ ಮೈನ್ ಕೋರಮಂಗಲ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560095
ಶಾಖಾ ಕಚೇರಿ : ನಂ. 1 & 2, ನೆಲ ಮಗಡಿ, ನಂ. 78/4ಆರ್‌ಎಸ್1–ಎಸ್2, ಲಿಮ್ರ ಹೈಟ್ಸ್ ಕಟ್ಟಡ, ಕೆ ಬಿ ಎಕ್ಸ್‌ಟೆನ್ಷನ್, ಎನ್‌ಆರ್ ರಿಲಯನ್ಸ್ ಮಾರ್ಕೆಟ್, ದಾವಣಗೆರೆ, ಕರ್ನಾಟಕ–577 002

ಇ–ಹರಾಜು ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್, 2002ನ್ನು ಓದಿಕೊಂಡಂತೆ ನಿಯಮ 8(6) ಮತ್ತು 9(1) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ಅನ್ವಯ ಇ–ಹರಾಜು ಮಾರಾಟ ಪ್ರಕಟಣೆ
ಕೆಳಸಹಿದಾರರು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಅಧಿಕೃತ ಅಧಿಕಾರಿಯಾಗಿದ್ದು, ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4)ರ ಸರ್ಫೇಸಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸ್ವಾಧೀನಪಡಿಸಿಕೊಂಡಿರುತ್ತಾರೆ. ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಪಟ್ಟಿ ಮಾಡಿರುವ ಸ್ಥಿರಾಸ್ತಿಗಳನ್ನು ಬ್ಯಾಂಕ್ ಗೆ ಬರಬೇಕಾಗಿರುವ ಬಾಕಿ ಹಣದ ವಸೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಆಧಾರದ ಮೇಲೆ ಈ ಕೆಳಗೆ ಹೆಸರಿಸಿರುವ ದಿನಾಂಕ ಮತ್ತು ಸಮಯದಂದು ಮಾರಾಟ ಮಾಡಲಿರುವರು.

ಸಾಲದ ಖಾತಾ ಸಂ./ ಸಾಲಗಾರರ ಸಹ–ಸಾಲಗಾರರು/ ಜಾಮೀನುದಾರರ ಹೆಸರು	(1) 13(2) ನೋಟೀಸ್ ದಿನಾಂಕ & ತಗಾದೆ ಮೊತ್ತ (2) ಸ್ವಾಧೀನತೆ ದಿನಾಂಕ	ಪ್ರಸಕ್ತ ಬಾಕಿ	ಮೀಸಲು ಬೆಲೆ (ಐಎನ್‌ಆರ್)	ಅರ್ನೆಸ್ಟ್ ಠೇವಣಿ ಹಣ (ಇಎಂಡಿ) (ಐಎನ್‌ಆರ್)
1132218860000009 & 1132220290000002 / 1. ಶ್ರೀ ಡಿ ಶಿವಕುಮಾರ್ 2. ಶ್ರೀ ಬಿ ಹೆಚ್ ಧನ್ಯ ನಾಯ್ಕ್ 3. ಶ್ರೀಮತಿ ಲೀಲಾ ಬಾಯಿ	(1) 08.12.2021 ಮತ್ತು ರೂ.11,03,675/– (ಹನ್ನೊಂದು ಲಕ್ಷ ಮೂರು ಸಾವಿರದ ಆರುನೂರ ಎಪ್ಪತ್ತೈದು ರೂಪಾಯಿ ಮಾತ್ರ) 08.12.2021 ರಂತೆ. (2) ಸಾಂಕೇತಿಕ ಸ್ವಾಧೀನತೆ : 08.07.2022 & ಭೌತಿಕ ಸ್ವಾಧೀನತೆ :20.01.2026	ರೂ.27,21,357.04 (ಇಪ್ಪತ್ತೇಳು ಲಕ್ಷ ಇಪ್ಪತ್ತೊಂದು ಸಾವಿರದ ಮುನ್ನೂರ ಐವತ್ತೇಳು ರೂಪಾಯಿ ಮಾತ್ರ) 10.04.2026 ರಂತೆ	₹ 18,81,000/- (ಹದಿನೆಂಟು ಲಕ್ಷ ಎಂಭತ್ತೊಂದು ಸಾವಿರ ರೂಪಾಯಿ ಮಾತ್ರ)	₹ 1,88,100/- (ಒಂದು ಲಕ್ಷ ಎಂಭತ್ತೆಂಟು ಸಾವಿರದ ನೂರು ರೂಪಾಯಿ ಮಾತ್ರ)

ಆಸ್ತಿಯ ವಿವರ /ಷೆಡ್ಯೂಲ್ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಕಟ್ಟಡವನ್ನು ಗ್ರಾಮ ಪಂಚಾಯತ್ ಆಸ್ತಿಯಾದ ಸೈಟ್ ನಂ. 22ರಲ್ಲಿ ನಿರ್ಮಾಣ ಮಾಡಲಾಗಿದ್ದು, ಖಾತಾ ನಂ. 93, ಗ್ರಾಮ ಪಂಚಾಯತ್ ನಂತೆ ಆಸ್ತಿ ನಂ. 22, ಇ–ಸ್ವತ್ತು ನಂ. 151200100500400091, ವಿಸ್ತೀರ್ಣ 9.144 x 15.24 ಮೀಟರ್, ಕವಲಿತಂಡ ಗ್ರಾಮ, ಕತಲಗೆರೆ ಗ್ರಾಮ ಪಂಚಾಯತ್, ಚನ್ನಗಿರಿ ಇಲ್ಲಿದ್ದು ಮತ್ತು ಚಕ್ಕುಬಂದಿ: ಪೂರ್ವಕ್ಕೆ : ಲಲಿತಾ ಬಾಯಿ ರವರ ಆಸ್ತಿ, ಪಶ್ಚಿಮಕ್ಕೆ : ಒಳಚರಂಡಿ, ಉತ್ತರಕ್ಕೆ : ಭೂಮಿ, ದಕ್ಷಿಣಕ್ಕೆ : ರಸ್ತೆ.

ಇ–ಹರಾಜಿನ ದಿನಾಂಕ ಮತ್ತು ಸಮಯ: 08.07.2026 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆ

ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ಆಸ್ತಿ ಪರಿವೀಕ್ಷಣೆ ದಿನಾಂಕ ಮತ್ತು ಸಮಯ
07.07.2026ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ	06.07.2026 ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ

ಹೆಚ್ಚಿನ ಮಾಹಿತಿಗಾಗಿ ಬ್ಯಾಂಕ್‌ನ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಿ: ಶ್ರೀ ನವರತ್ನ– ಮೊ. : 96633 84014 / ಶ್ರೀ ಟಿಜೊ ಸಾಜನ್ – 78451 92961

ಹರಾಜನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ನಡೆಸಲಾಗುವುದು
ಹರಾಜನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅನುಮೋದಿತ ಇ–ಹರಾಜು ಸೇವಾ ಪೂರೈಕೆದಾರ – ಮೆ॥ ಸಿ1 ಇಂಡಿಯ ಪ್ರೈ. ಲಿ., ಮೂಲಕ ನಡೆಸಲಾಗುವುದು. ಸಂಪರ್ಕ ವ್ಯಕ್ತಿ: ಶ್ರೀ ಪ್ರಭಾಕರನ್ (ಮೊ. ಸಂ. 74182 81709). ಅಪೇಕ್ಷಿತ ಬಿಡ್ದುದಾರರು https://www.bankeauctions.com ಅಥವಾ https://www.ujjivanfb.in/e-auctions ಗೆ ಭೇಟಿ ನೀಡಿ ಆಸ್ತಿಗಳ ಹೆಚ್ಚಿನ ವಿವರಗಳನ್ನು ತಿಳಿದುಕೊಂಡು, ಬಿಡ್‌ನಲ್ಲಿ ಭಾಗವಹಿಸಬಹುದು ಹಾಗೂ ಅವರು ತಮ್ಮ ಹೆಸರನ್ನು https://www.bankeauctions.com ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಉಚಿತವಾಗಿ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದು. ಅಪೇಕ್ಷಿತ ಬಿಡ್ದುದಾರರು ಇಹರಾಜು ಬಗ್ಗೆ ಆನ್‌ಲೈನ್ ತರಬೇತಿಯನ್ನು ಸೇವಾ ಪೂರೈಕೆದಾರರಾದ ಮೆ॥ ಸಿ1 ಇಂಡಿಯ ಪ್ರೈ.ಲಿ., ಸಹಾಯವಾಣಿ ಸಂ.72919 18824, 25, 26, ಸಪೋರ್ಟ್ ಇ–ಮೇಲ್ ಐಡಿ : support@bankeauctions.com ಹರಾಜು ಪೋರ್ಟಲ್ : https://www.bankeauctions.com.
ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್‌ನ್ನು ಆಧಾರ ಮಾಡಿಕೊಳ್ಳಿ
https://www.ujjivansfb.in/e-auctions / https://www.bankeauctions.com ಸಹಿ/–
ದಿನಾಂಕ: 27.05.2026, ಸ್ಥಳ : ಬೆಂಗಳೂರು ಅಧಿಕೃತ ಅಧಿಕಾರಿ, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಲಿಮಿಟೆಡ್

ಕಾರ್ಪೊರೇಟ್ ಕಚೇರಿ: ಮೋತಿಲಾಲ್ ಓಸ್ವಾಲ್ ಟವರ್, ರಹೀಮ್ತುಲ್ಲಾ ಸಯಾನಿ ರಸ್ತೆ, ಎಸ್ಟಿ ಡಿಪೋ ಎದುರು, ಪ್ರಭಾದೇವಿ, ಮುಂಬೈ–400025.
ಇಮೇಲ್:– hfquery@motilaloswal.com. CIN ಸಂಖ್ಯೆ :– U65923MH2013PLC248741

ಇ–ಹರಾಜು ಕಮ್ ಮಾರಾಟಕ್ಕೆ ಸಾರ್ವಜನಿಕ ಸೂಚನೆ

2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ 8 ಮತ್ತು 9 ನೇ ನಿಯಮಗಳ ನಿಬಂಧನೆಯೊಂದಿಗೆ ಓದಲಾದ 2002 ರ ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ಅಡಿಯಲ್ಲಿ ಸ್ಥಿರ ಆಸ್ತಿ(ಗಳ) ಮಾರಾಟಕ್ಕೆ 15 ದಿನಗಳ ಇ–ಹರಾಜು ಮಾರಾಟ ಸೂಚನೆ.
ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರು/ಖಾತರಿದಾರರು/ಅಡಮಾನದಾರರಿಗೆ ಸೂಚನೆ ನೀಡುತ್ತಾ, **ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಲಿಮಿಟೆಡ್** (ಹಿಂದೆ ಆಸ್ಪೈರ್ ಹೋಮ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ಗೆ ಅಡಮಾನ ಇಡಲಾದ ಕೆಳಗೆ ಉಲ್ಲೇಖಿಸಲಾದ ಆಸ್ತಿಯನ್ನು **"ಎಲ್ಲಿದೆಯೋ ಅಲ್ಲಿ", " ಹೇಗಿದೆಯೋ ಹಾಗೆ"** ಮತ್ತು **"ಏನಿದೆಯೋ ಅದೇ" "ಆನ್ಲೈನ್ ಇ–ಹರಾಜು"** ಮೂಲಕ ಬಾಕಿ ಮತ್ತು ಹೆಚ್ಚಿನ ಬಡ್ಡಿ, ಶುಲ್ಕಗಳು ಮತ್ತು ವೆಚ್ಚಗಳನ್ನು ವಸೂಲಿ ಮಾಡಲು, ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮಗಳು 8 ಮತ್ತು 9 ರೊಂದಿಗೆ ಓದಲಾದ SARFAESI ಕಾಯ್ದೆಯ ನಿಬಂಧನೆಗಳ ಪ್ರಕಾರ ಕೆಳಗೆ ವಿವರಿಸಿದಂತೆ motilaloswalhf.com ವೆಬ್‌ಸೈಟ್ ಮೂಲಕ ಕೆಳಗೆ ನೀಡಲಾದ ವಿವರಗಳ ಪ್ರಕಾರ ಮಾರಾಟ ಮಾಡಲಾಗುತ್ತದೆ:

ಇ–ಹರಾಜಿನ ದಿನಾಂಕ ಮತ್ತು ಸಮಯ:– ದಿನಾಂಕ: 18–06–2026, ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 02:00 ರವರೆಗೆ (ಪ್ರತಿಯೊಂದಕ್ಕೂ 15 ನಿಮಿಷಗಳ ಅನಿಯಮಿತ ವಿಸ್ತರಣೆಗಳೊಂದಿಗೆ)

ಕ್ರಮ ಸಂಖ್ಯೆ.	ಸಾಲಗಾರರು / ಜಾಮೀನುದಾರರು / ಸಾಲ ಖಾತೆ	ಡಿಮ್ಯಾಂಡ್ ನೋಟೀಸ್ ದಿನಾಂಕ ಮತ್ತು ಮೊತ್ತ	ಸ್ಥಿರ ಆಸ್ತಿಯ ವಿವರಣೆ	ಮೀಸಲು ಬೆಲೆ, ಇಎಂಡಿ ಮತ್ತು ಇಎಂಡಿ ಸಲ್ಲಿಸುವ ಕೊನೆಯ ದಿನಾಂಕ
1.	ಲ್ಯಾನ್: LXSHI00517-180051140 ಶಾಖೆ: ಶಿವಮೊಗ್ಗ ಸಾಲಗಾರ: ಮನುನಾಥ್ ಆರ್. ಸಹ–ಸಾಲಗಾರರು: ಪುಷ್ಪಾ ಆರ್. ಖಾತರಿದಾರ:	23–06–2021 ರೂ.ಗಳಿಗೆ: 366954/– (ರೂಪಾಯಿ ಮೂರು ಲಕ್ಷದ ಅರವತ್ತಾರು ಸಾವಿರದ ಒಂಬತ್ತು ನೂರಾ ಐವತ್ನಾಲ್ಕು ಮಾತ್ರ)	ಖಾತೆ ನಂ–744/962/953, ವಾರ್ಡ್ ನಂ –14, ಮಲವಗೊಪ್ಪ, ಶಿವಮೊಗ್ಗ, ಕರ್ನಾಟಕ – 577222	ಮೀಸಲು ಬೆಲೆ: ರೂ. 300000/– (ರೂಪಾಯಿ ಮೂರು ಲಕ್ಷ ಮಾತ್ರ) ಇಎಂಡಿ: ರೂ.30000/– (ರೂಪಾಯಿ ಮೂವತ್ತು ಸಾವಿರ ಮಾತ್ರ) ಇಎಂಡಿ ಠೇವಣಿಯ ಕೊನೆಯ ದಿನಾಂಕ: 17–06–2026
2	ಲ್ಯಾನ್: LXSHI00417-180054138 ಶಾಖೆ: ಶಿವಮೊಗ್ಗ ಸಾಲಗಾರ: ಟಿ.ಎಂ.ಲಿಂಗನಗೌಡ ಸಹ–ಸಾಲಗಾರರು: ರುದ್ರಮ್ಮ ಬಿ. ಖಾತರಿದಾರ:	23–06–2021 ರೂ.ಗಳಿಗೆ: 275416/– (ಎರಡು ಲಕ್ಷದ ಎಪ್ಪತ್ತೈದು ಸಾವಿರದ ನಾಲ್ಕುನೂರ ಹದಿನಾರು ರೂಪಾಯಿಗಳು ಮಾತ್ರ)	ಆಸ್ತಿ ಸಂಖ್ಯೆ –24, ಜಂಜಾರ್ ಸಂಖ್ಯೆ – 24, SI ನಂ –83, ಅಸೆಸ್ಮೆಂಟ್ ನಂ – 24/2, ನಾಗೇನಹಳ್ಳಿ ಗ್ರಾಮ, ಸಿದ್ದನಮ್ಮಟ್ಟಿ ಜಿಪಿ, ಸಾತೇಬೆನೂರು, ಭನಗಿರಿ, ದಾವಣಗೆರೆ, ವಾಟರ್ ಟ್ಯಾಂಕ್ ಎದುರು, ಆಂಜನೇಯ ದೇವಸ್ಥಾನದ ಪಕ್ಕ, ದಾವಣಗೆರೆ, ಕರ್ನಾಟಕ – 577552	ಮೀಸಲು ಬೆಲೆ: ರೂ.300000/– (ರೂಪಾಯಿ ಮೂರು ಲಕ್ಷ ಮಾತ್ರ) ಇಎಂಡಿ: ರೂ.30000/– (ರೂಪಾಯಿ ಮೂವತ್ತು ಸಾವಿರ ಮಾತ್ರ) ಇಎಂಡಿ ಠೇವಣಿಯ ಕೊನೆಯ ದಿನಾಂಕ: 17–06–2026
3	ಲ್ಯಾನ್: LXSH100417-180061801 ಶಾಖೆ: ಶಿವಮೊಗ್ಗ ಸಾಲಗಾರ: ತಿಮ್ಮಣ್ಣ ಆರ್. ಸಹ–ಸಾಲಗಾರ: ಪ್ರಕಾಶ್ ಟಿ. ಖಾತರಿದಾರ:	22–02–2021 ರೂ.ಗಳಿಗೆ: 537370/– (ಐದು ಲಕ್ಷದ ಮೂವತ್ತೇಳು ಸಾವಿರದ ಮುನ್ನೂರ ಎಪ್ಪತ್ತು ರೂಪಾಯಿಗಳು ಮಾತ್ರ)	ಇ ಆಸ್ತಿ ಸಂಖ್ಯೆ–152400103600200083, ಶ್ರೀಮತಿ ಪಾರ್ವತಿ W/o ತಿಮ್ಮಣ್ಣ, ಆಸ್ತಿ ಖಾತೆ ಸಂಖ್ಯೆ 53/2, ಬಾಬಲ್ಲಿ, ಬದ್ರಾ ಕಾಲೋನಿ, ಗಂಗಮ್ಮ ದೇವಸ್ಥಾನದ ಹತ್ತಿರ, ಭದ್ರಾವತಿ, ಶಿವಮೊಗ್ಗ ಕರ್ನಾಟಕ 577301	ಮೀಸಲು ಬೆಲೆ: ರೂ.371312/– (ರೂಪಾಯಿ ಮೂರು ಲಕ್ಷದ ಎಪ್ಪತ್ತೊಂದು ಸಾವಿರ ಮುನ್ನೂರ ಹನ್ನೆರಡು ಮಾತ್ರ) ಇಎಂಡಿ: ರೂ.37131/– (ರೂಪಾಯಿ ಮೂವತ್ತೇಳು ಸಾವಿರದ ನೂರ ಮೂವತ್ತೊಂದು ಮಾತ್ರ) ಇಎಂಡಿ ಠೇವಣಿಯ ಕೊನೆಯ ದಿನಾಂಕ: 17–06–2026
5	ಲ್ಯಾನ್: LXSHI00117-180061964 ಶಾಖೆ: ಶಿವಮೊಗ್ಗ ಸಾಲಗಾರ: ರಂಗಸ್ವಾಮಿ ಎಸ್ ಸಹ–ಸಾಲಗಾರ: ಮಂಜಮ್ಮ ಎಸ್. ಖಾತರಿದಾರ:	07–11–2024 ರೂ.ಗಳಿಗೆ: 210067/– (ಎರಡು ಲಕ್ಷದ ಹತ್ತು ಸಾವಿರ ಮತ್ತು ಅರವತ್ತೇಳು ರೂಪಾಯಿಗಳು ಮಾತ್ರ)	ಇಲ್ಲಿ ನಂ.372/290 ಇ ಆಸ್ತಿ ಸಂಖ್ಯೆ 151000402300120029 ಬಂಜಗೊಂಡನ ಹಳ್ಳಿ ಗ್ರಾಮ ಟಿ ನುಲೇನೂರು ಹೊಳಲ್ಕೆರೆ ಚಿತ್ರದುರ್ಗ 0 0 577557 ಹೊಳಲ್ಕೆರೆ ಶಿವಮೊಗ್ಗ ಕರ್ನಾಟಕ	ಮೀಸಲು ಬೆಲೆ: ರೂ.300000/– (ರೂಪಾಯಿ ಮೂರು ಲಕ್ಷ ಮಾತ್ರ) ಇಎಂಡಿ: ರೂ.30000/– (ರೂಪಾಯಿ ಮೂವತ್ತು ಸಾವಿರ ಮಾತ್ರ) ಇಎಂಡಿ ಠೇವಣಿಯ ಕೊನೆಯ ದಿನಾಂಕ: 17–06–2026

ಇ–ಹರಾಜಿನ ನಿಯಮಗಳು ಮತ್ತು ಷರತ್ತುಗಳು: ಬಿಡ್ ದಾಖಲೆಯ ಮುಂದಿನ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ನಿಗದಿಪಡಿಸಿದ ಕಾರ್ಯವಿಧಾನದ ಪ್ರಕಾರ ಹರಾಜನ್ನು ನಡೆಸಲಾಗುತ್ತದೆ. ಬಿಡ್ದಾರರು ಬಿಡ್ಡಿಂಗ್ ಮಾಹಿತಿ ಮತ್ತು ಬೆಂಬಲಕ್ಕಾಗಿ ನಮ್ಮ ಇ–ಹರಾಜು ಸೇವಾ ಪೂರೈಕೆದಾರರಾದ **M/s ಕ್ರೆಡಿಸೊಲ್ಯೂಷನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ** ವೆಬ್ ಪೋರ್ಟಲ್ಗೆ ಭೇಟಿ ನೀಡಬಹುದು: credauction.com, ಇ–ಹರಾಜಿಗಾಗಿ ಇರಿಸಲಾದ ಸುರಕ್ಷಿತ ಆಸ್ತಿಯ ವಿವರಗಳು ಮತ್ತು ಆನ್ಲೈನ್ನಲ್ಲಿ ಸಲ್ಲಿಸಲಾಗುವ ಬಿಡ್ ಫಾರ್ಮ್. ಆಸಕ್ತ ಖರೀದಿದಾರರು ಹರಾಜಿನ ನಿಯಮಗಳು ಮತ್ತು ಷರತ್ತುಗಳು ಮತ್ತು ಪ್ರಕ್ರಿಯೆಯನ್ನು ಅದೇ ಪೋರ್ಟಲ್ನಲ್ಲಿ ಪರಿಶೀಲಿಸಬಹುದು ಮತ್ತು **ಬೊಪ್ಪೂರಿ ನಾಗರಾಜು 7304997399 ಮತ್ತು ಶಾಂತ ಕುಮಾರ್ ಪಿ 9731080228, ನಂದಕುಮಾರ್ ಪಿ 8976737857 ಅವರನ್ನು ಸಂಪರ್ಕಿಸಬಹುದು, ಮೇಲೆ ತಿಳಿಸಲಾದ ವೆಬ್ ಪೋರ್ಟಲ್ನಲ್ಲಿ ಲಭ್ಯವಿರುವ ವಿವರಗಳು ಮತ್ತು ಅವರ ಕೇಂದ್ರೀಕೃತ ಸಹಾಯ ಕೇಂದ್ರ:** +91 9137100020, ಇ–ಮೇಲ್ ಐಡಿ: **balram@credsolv.com** ಅನ್ನು ಸಂಪರ್ಕಿಸಬಹುದು.

ಸ್ಥಳ: ಕರ್ನಾಟಕ. ಸಹಿ/–ಅಧಿಕೃತ ಅಧಿಕಾರಿ
ದಿನಾಂಕ: 27.05.2026. (ಮೋತಿಲಾಲ್ ಓಸ್ವಾಲ್ ಹೋಮ್ ಫೈನಾನ್ಸ್ ಲಿಮಿಟೆಡ್) (ಹಿಂದೆ ಆಸ್ಪೈರ್ ಹೋಮ್ ಫೈನಾನ್ಸ್ ಕಾರ್ಪೋರೇಷನ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಮಣಪ್ಪುರಂ ಹೋಮ್ ಫೈನಾನ್ಸ್ ಲಿಮಿಟೆಡ್
ಹಿಂದೆ ಮಣಪ್ಪುರಂ ಹೋಮ್ ಫೈನಾನ್ಸ್ ಪ್ರೈ. ಲಿ.
ಸಿಐಎನ್: U65923KL2010PLC039179
ನೋಂದಾಯಿತ ಕಛೇರಿ: 8/596, ಪದ್ಮಪ್ರಭ ಕಟ್ಟಡ, ಶ್ರೀರಾಮ ಸ್ವಾಮಿ ದೇವಸ್ಥಾನದ ಹತ್ತಿರ, ಚೆರ್ಪು– ತ್ರಿಪ್ರಯಾರ್ ರಸ್ತೆ, ತ್ರಿಪ್ರಯಾರ್, ತ್ರಿಶೂರ್, ಕೇರಳ 680567 । ದೂರವಾಣಿ ಸಂಖ್ಯೆ: 0487–3520504, ವೆಬ್‌ಸೈಟ್: www.manappuramhomefin.com

ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಾಗಿ)

ಆದರೆ, ಕೆಳಗೆ ಸಹಿ ಮಾಡಿರುವವರು **ಮಣಪ್ಪುರಂ ಹೋಮ್ ಫೈನಾನ್ಸ್ ಲಿಮಿಟೆಡ್ ("MAHOFIN")** ನ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ("ಆಕ್ಟ್"), 2002 (2002 ರ 54) ಅಡಿಯಲ್ಲಿ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 9 ರೊಂದಿಗೆ ಓದಲಾದ ಸೆಕ್ಷನ್ 13(12) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಸಾಲಗಾರರು ಮತ್ತು ಸಹ–ಸಾಲಗಾರರು ನೋಟೀಸ್ ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ನೋಟೀಸ್ ಮತ್ತು ಅದರ ಮೇಲಿನ ಬಡ್ಡಿಯಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ಮರುಪಾವತಿಸಲು ಕರೆ ನೀಡುವ **ಡಿಮ್ಯಾಂಡ್ ನೋಟೀಸ್** ಅನ್ನು ಹೊರಡಿಸಿದ್ದಾರೆ. ಸಾಲಗಾರರು ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದು, ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಕೆಳಗೆ ವಿವರಿಸಿದ ಆಸ್ತಿಯನ್ನು ಅವನಿಗೆ/ಅವಳಿಗೆ ನೀಡಲಾದ ನಿಯಮಗಳ ಸೆಕ್ಷನ್ 13(4) ರ ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುವ ಮೂಲಕ ನೋಟೀಸ್ ನೀಡಲಾಗಿದೆ. ಸಾಲಗಾರರು, ವಿಶೇಷವಾಗಿ ಸಾಲಗಾರರು ಮತ್ತು ಸಾರ್ವಜನಿಕರು ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗೆ ಯಾವುದೇ ವ್ಯವಹಾರವು ಕೆಳಗೆ ಉಲ್ಲೇಖಿಸಿದಂತೆ ಮಣಪ್ಪುರಂ ಹೋಮ್ ಫೈನಾನ್ಸ್ ಲಿಮಿಟೆಡ್‌ನ ಶುಲ್ಕಕ್ಕೆ ಒಳಪಟ್ಟಿರುತ್ತದೆ: ಕೆಳಗೆ ಉಲ್ಲೇಖಿಸಿದಂತೆ ಪ್ರತಿಯೊಂದು ಆಸ್ತಿಗೂ:

ಕ್ರ.ಸಂ	ಸಾಲಗಾರನ ಹೆಸರು ಮತ್ತು ಸಹ–ಸಾಲಗಾರ/ ಸಾಲ ಖಾತೆ ಸಂಖ್ಯೆ/ಶಾಖೆ	ಯಾವ ಹಿತಾಸಕ್ತಿಯನ್ನು ಸೃಷ್ಟಿಸಲಾಗಿದೆ ಎಂಬುದರ ಕುರಿತು ಸುರಕ್ಷಿತ ಆಸ್ತಿಯ ವಿವರಣೆ	ಡಿಮ್ಯಾಂಡ್ ನೋಟೀಸ್ ಕಳುಹಿಸಿದ ದಿನಾಂಕ ಮತ್ತು ಬಾಕಿ ಮೊತ್ತ	ನೈಜ ಸ್ವಾಧೀನದ ದಿನಾಂಕ
1	ಯಶೋಧ ಕೆ, ಕುಮಾರಪ್ಪ ಡಿ, / MHL00510019258/ ಶಿವಮೊಗ್ಗ	ಸೈಟ್/ಖಾತಾ/ಆಸ್ತಿ ಹೊಂದಿರುವ ಸಂಖ್ಯೆ 334/3/A, ಇ–ಆಸ್ತಿ ಸಂಖ್ಯೆ 152400500100100308, ಪೂರ್ವ–ಪಶ್ಚಿಮ ಅಳತೆ 18.288 ಮೀಟರ್ X ಉತ್ತರ–ದಕ್ಷಿಣ 6.096 ಮೀಟರ್, ಒಟ್ಟು 111.48 ಚದರ ಮೀಟರ್, 41.81 ಚದರ ಮೀಟರ್ ಸೇರಿದಂತೆ ಬಾಳೆಕೊಪ್ಪ–1 ಗ್ರಾಮದಲ್ಲಿದೆ, ಬಾಳೆಕೊಪ್ಪ ಗ್ರಾಮ ಪಂಚಾಯತ್, ಶಿವಮೊಗ್ಗ ತಾಲ್ಲೂಕು, ಕರ್ನಾಟಕ, ಪಿನ್: 577423. ಪೂರ್ವ–ಹಿಡುವಳಿ ಭೂಮಿ, ಪಶ್ಚಿಮ–ರಸ್ತೆ, ದಕ್ಷಿಣ–ಶಾರದಮ್ಮನ ಮನೆ, ಉತ್ತರ–ಹನುಮಂತಪ್ಪನ ಮನೆ.	22–01–2026 & ರೂ. 383195/–	23–05–2026
2	ಶಿವರಾಜ ನಾಯ್ಕ್ HP, ಪಾಪಾ ನಾಯ್ಕ್, ಸೀತಾ ಬಾಯಿ, / NHL00510010714/ ಶಿವಮೊಗ್ಗ	ಆಸ್ತಿ ನಿವೇಶನದ ಎಲ್ಲಾ ಭಾಗ ಅಥವಾ ವಿಭಾಗಗಳು, ಅದರ ಮೇಲೆ ನಿಂತಿರುವ ರಚನೆಯೊಂದಿಗೆ, ನಿವೇಶನ/ಆಸ್ತಿ ಸಂಖ್ಯೆ 206, ಇ–ಆಸ್ತಿ ಸಂಖ್ಯೆ 152400502600500288, ಪೂರ್ವ–ಪಶ್ಚಿಮ ಅಳತೆ 12.192 X ಉತ್ತರ–ದಕ್ಷಿಣ 24.384 ಮೀಟರ್, ಒಟ್ಟು 297.29 ಚದರ ಮೀಟರ್, 102.19 ಚದರ ಮೀಟರ್ ಕಟ್ಟಡ ಸೇರಿದಂತೆ, ಹುಣಸೋಡು ಗ್ರಾಮದಲ್ಲಿದೆ, ಅಬ್ಬಲಗೆರೆ ಗ್ರಾಮ ಪಂಚಾಯತ್, ಶಿವಮೊಗ್ಗ ತಾಲ್ಲೂಕು, ಕರ್ನಾಟಕ, ಪಿನ್: 577225. ಪೂರ್ವ–ದುರ್ಗ್ಯಾ ನಾಯ್ಕಾ ಆಸ್ತಿ ಪಶ್ಚಿಮ–ಪೀಕ್ಯಾ ನಾಯ್ಕಾ ಆಸ್ತಿ ದಕ್ಷಿಣ–ರಸ್ತೆ ಉತ್ತರ–ರಸ್ತೆ	22–01–2026 & ರೂ. 1032133/–	23–05–2026

ದಿನಾಂಕ: 27ನೇ ಮೇ 2026 । ಸ್ಥಳ: ಕರ್ನಾಟಕ ಸಹಿ/– ಅಧಿಕೃತ ಅಧಿಕಾರಿ ಮಣಪ್ಪುರಂ ಹೋಮ್ ಫೈನಾನ್ಸ್ ಲಿಮಿಟೆಡ್

SRG HOUSING FINANCE LIMITED
ಎಸ್‌ಆರ್‌ಜಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್
CIN: L65922RJ1999PLC015440
ನೋಂ. ಕಚೇರಿ : 321, ಎಸ್ ಎಂ ಲೋಢಾ ಕಾಂಪ್ಲೆಕ್ಸ್, ಶಾಸ್ತ್ರಿ ವೃತ್ತದ ಹತ್ತಿರ, ಉದಯ್‌ಪುರ – 313001 (ರಾಜಸ್ಥಾನ)
ದೂರವಾಣಿ : 0294-2412609 ಇ–ಮೇಲ್ : info@srghousing.com ವೆಬ್‌ಸೈಟ್ : www.srghousing.com

ಸೆಕ್ಷನ್ 13(2) ರ ಸರ್ಫೇಸಿ ಕಾಯಿದೆ, 2002 ರ ಅಡಿ ತಗಾದೆ ಸೂಚನೆ

ಕೆಳಗೆ ತಿಳಿಸಲಾದ ಸಾಲಗಾರರು, ಸಹ–ಸಾಲಗಾರರು, ಅಡಮಾನದಾರರು ಮತ್ತು ಜಾಮೀನುದಾರರು (ಇನ್ನು ಮುಂದೆ "ಸಾಲಗಾರರು" ಎಂದು ಕರೆಯಲಾಗುತ್ತದೆ) ನಿಮ್ಮ ಸ್ಥಿರ ಆಸ್ತಿ(ಗಳನ್ನು) ಅಡಮಾನ ಇಟ್ಟು ಎಸ್.ಆರ್.ಜಿ. ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಎಸ್‌ಆರ್‌ಜಿಹೆಚ್‌ಎಫ್‌ಎಲ್) ನಿಂದ ಸಾಲದ ಸೌಲಭ್ಯ(ಗಳನ್ನು) ಪಡೆದಿದ್ದೀರಿ ಮತ್ತು ಅದರ ಮರುಪಾವತಿಯಲ್ಲಿ ಸುಸ್ತಿದಾರರಾಗಿರುವುದರಿಂದ ಎನ್‌ಪಿಎ ಎಂದು ವರ್ಗೀಕರಿಸಲಾಗಿದೆ. ಅಧಿಕೃತ ಅಧಿಕಾರಿಯು ಬಾಕಿ ಮೊತ್ತವನ್ನು ವಸೂಲು ಮಾಡಲು, ಸೆಕ್ಯುರಿಟೈಸೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸಟ್ಸ್ ಅಸೆಟ್ಸ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 (ಕಾಯಿದೆ) ರ ಸೆಕ್ಷನ್ 13(2) ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ ತಗಾದೆ ಸೂಚನೆಯನ್ನು ನೀಡಿರುತ್ತಾರೆ. ಸಾಲಗಾರರು ನೋಟೀಸ್ ಸೇವೆಯನ್ನು ತಪ್ಪಿಸುತ್ತಿದ್ದಾರೆ ಅಥವಾ ಯಾವುದೇ ಕಾರಣದಿಂದ ನೋಟೀಸ್ ನೇರವಾಗಿ ತಲುಪಿಸಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕೃತ ಅಧಿಕಾರಿಗೆ ನಂಬಿಕೆ ಇರುವುದರಿಂದ, ಈ ನೋಟೀಸಿನ ವಿಷಯಗಳನ್ನು ಪರ್ಯಾಯ ಸೇವೆಯಾಗಿ ಇಲ್ಲಿ ಪ್ರಕಟಿಸಲಾಗುತ್ತಿದೆ. ಆದ್ದರಿಂದ, ನೀವುಗಳಾದ ಸಾಲಗಾರರು ಈ ಕೆಳಗೆ ನಮೂದಿಸಿದ ಬಾಕಿ ಮೊತ್ತವನ್ನು ಭವಿಷ್ಯದ ಬಡ್ಡಿ, ಅನುಷಂಗಿಕ ವೆಚ್ಚಗಳು, ಶುಲ್ಕಗಳು ಇತ್ಯಾದಿಗಳಳನ್ನು ಈ ನೋಟೀಸ್ ದಿನಾಂಕದಿಂದ 60 ದಿನಗಳ ಒಳಗೆ ಸಂಪೂರ್ಣವಾಗಿ ಪಾವತಿಸುವಂತೆ ಕೋರಲಾಗುತ್ತದೆ. ನೀವು ಆನ್‌ಲೈನ್ ಮೂಲಕ (ಡೆಬಿಟ್ / ಕ್ರೆಡಿಟ್ / ಎನ್‌ಇಎಫ್‌ಟಿ/ಆರ್‌ಟಿಜಿಎಸ್/ಯುಪಿಐ) ಮೂಲಕ ಪಾವತಿಸಲು **www.srghousing.com** ಗೆ ಲಾಗಿನ್ ಆಗಿ ಪಾವತಿ ಮಾಡಬಹುದು ಮತ್ತು ಯಶಸ್ವಿ ಪಾವತಿಯ ನಂತರ ವಿವರಗಳನ್ನು ಹಂಚಿಕೊಳ್ಳಿ. ಹಾಗೆ ಮಾಡಲು ವಿಫಲವಾದಲ್ಲಿ, ಕಾಯಿದೆಯ ಸೆಕ್ಷನ್ 13(4) ಮತ್ತು 14 ರ ಅಡಿಯಲ್ಲಿ ಕ್ರಮ ಕೈಗೊಳ್ಳಲು ಅಧಿಕಾರವನ್ನು ಹೊಂದಿರುತ್ತಾರೆ. ನಿಮ್ಮ ಗಮನಕ್ಕೆ ತರಲು ಬಯಸುವುದೇನೆಂದರೆ, ಸೆಕ್ಷನ್ 13(8) ಮತ್ತು 13(13) ರಲ್ಲಿ ಅವಕಾಶವಿರುವಂತೆ ಬಾಕಿ ಉಳೀದ ಸಮಯಾವಕಾಶದಲ್ಲಿ ಭದ್ರತಾ ಆಸ್ತಿಗಳನ್ನು ಮರುಪಡೆದುಕೊಳ್ಳಬಹುದು ಮತ್ತಿ ನಮ್ಮ ಪೂರ್ವಾನುಮತಿ ಇಲ್ಲದೆ, ಭದ್ರತಾ ಶ್ತಿಗಳ ಮಾರಾಟ, ಭೋಗ್ಯ ಅಥವಾ ಇನ್ನಿತರೆ ಯಾವುದೇ ರೀತಿಯಲ್ಲಿ ವರ್ಗಾವಣೆ ಮಾಡುವಂತಿಲ್ಲ.

ಕ್ರ. ಸಂ.	ಸಾಲದ ಖಾತಾ ಸಂಖ್ಯೆ (ಎಲ್‌ಎಎನ್)/ ಸಾಲಗಾರರು/ಸಹ–ಸಾಲಗಾರರು/ ಜಾಮೀನುದಾರರು	1. ತಗಾದೆ ಸೂಚನೆ ದಿನಾಂಕ: 2. ತಗಾದೆ ಸೂಚನೆಯಂತೆ ಕ್ಲೈಮು ಮಾಡಲಾದ ಮೊತ್ತ	ಸ್ಥಿರ ಆಸ್ತಿಯ ವಿವರ (ಒಟ್ಟಾಗಿ ಕಟ್ಟಡ ಮತ್ತು ರಚನೆಗಳು ಭವಿಷ್ಯದಲ್ಲಿ ನಿರ್ಮಿಸಬೇಕಾಗಿರುವಂತಹುದು ಜೊತೆಗೆ ಅಳವಡಿಕೆಗಳು ಫಿಟ್ಟಿಂಗ್‌ಗಳು ಭೂಮಿಯ ಮೇಲ್ಮೈ ಹಾಗೂ ಒಳಭಾಗದಲ್ಲಿರುವುದೆಲ್ಲವನ್ನು ಒಳಗೊಂಡಂತೆ)
1.	HLR00000000023216 ಶ್ರೀ ರಾಹುಲ್ ಕೆ, ಬಿನ್ ಶ್ರೀ ಕೃಷನ್ ಕೆ (ಸಾಲಗಾರ) ಶ್ರೀ ಪ್ರೇಮಲತ ಕೆ ಕೋಂ ಶ್ರೀ ಕೆ ಕೃಷ್ಣ (ಸಹ–ಸಾಲಗಾರ–1) ಶ್ರೀ ಕೆ ಕೃಷ್ಣ ಬಿನ್ ಶ್ರೀ ಕೆಂಚಪ್ಪ (ಸಹ–ಸಾಲಗಾರ–2)	1. ತಗಾದೆ ಸೂಚನೆ ದಿನಾಂಕ: ಎಪ್ರಿಲ್ 09, 2026 2. ತಗಾದೆ ಸೂಚನೆಯಂತೆ ಕ್ಲೈಮು ಮಾಡಲಾದ ಮೊತ್ತ ರೂ.31,44,320/– ಅಕ್ಷರಳಲ್ಲಿ ಮೂವತ್ತೊಂದು ಲಕ್ಷದ ನಲವತ್ತನಾಲ್ಕು ಸಾವಿರದ ಮುನ್ನೂರ ಇಪ್ಪತ್ತು ರೂಪಾಯಿಗಳು ಮಾತ್ರ ಎಪ್ರಿಲ್10, 2026 ರಂತೆ ಮತ್ತು ಭವಿಷ್ಯದ ಬಡ್ಡಿ, ಮೂಲ ವೆಚ್ಚಗಳು, ಖರ್ಚು, ದರಗಳು ಇತ್ಯಾದಿ ಎಪ್ರಿಲ್ 10, 2026 ರಿಂದ.	ಸ್ಥಿರ ಆಸ್ತಿಯ ವಿವರಣೆ : ಮಾಲೀಕರಾದ ಶ್ರೀ ಕೆ. ಕೃಷ್ಣ, ತಂದೆ ಶ್ರೀ ಕೆಂಚಪ್ಪ ಹೆಸರಿನಲ್ಲಿರುವ ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿ ಪಿಡಿ ನಂ: 26–1–506–72ಬಿ, ಅಸೆಸ್‌ಮೆಂಟ್ ನಂ: 27561948017991, ವಾರ್ಡ್ ನಂ: 26, ಜೆಸಿಆರ್ ಬಡಾವಣೆ, ಚಿತ್ರದುರ್ಗ ತಾಲ್ಲೂಕು: ಚಿತ್ರದುರ್ಗ, ಜಿಲ್ಲೆ: ಚಿತ್ರದುರ್ಗ (ಕರ್ನಾಟಕ) ಇಲ್ಲಿದ್ದು, ಒಟ್ಟು ವಿಸ್ತೀರ್ಣ: ಸುಮಾರು 484.00 ಚದರ ಅಡಿಗಳು ಮತ್ತು ಚಕ್ಕುಬಂದಿ : ಪೂರ್ವ : ಕೆ. ಸುಜಾತಾ ಅವರ ಮನೆ, ಪಶ್ಚಿಮ : ಗೊಲ್ಲಲಪ್ಪ ಅವರ ಮನೆ, ಉತ್ತರ : ದೊಡ್ಡ ರಸ್ತೆ, ದಕ್ಷಿಣ : ಕೆ. ಜಗದೀಶ್ ಅವರ ಮನೆ

ಸ್ಥಳ: ಕರ್ನಾಟಕ ಸಹಿ/–
ದಿನಾಂಕ : 27.05.2026 ಅಧಿಕೃತ ಅಧಿಕಾರಿ, ಎಸ್‌ಆರ್‌ಜಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್